5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂ:10038/2021

ಪಿಡಬ್ಲೂ 03
ಸಿಡಬ್ಲೂ 04

| | | |
|---|---|---|
| ಸಾಕ್ಷಿ ಹೆಸರು | - | ನಾಗರಾಜ |
| ತಂದೆ ಹೆಸರು | - | ರಾಮಚಂದ್ರಪ್ಪ |
| ವಯಸ್ಸು | - | 32 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸ: | - | ಸಾರೇಕೊಪ್ಪ, ಸೊರಬ ತಾಲ್ಲೂಕು. |

ಪ್ರಮಾಣ ವಚನ ಭೋದಿಸಿದ ದಿನಾಂಕ: 25-07-2022.

ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಅಭಿಯೋಜಕರವರಿಂದ:

ಆರೋಪಿತರು ನನಗೆ ಗೊತ್ತು. ನನಗೆ ಪ್ರಾ.ಸಾ -1 ಮತ್ತು ಪ್ರಾ.ಸಾ 2 ರವರು ಗೊತ್ತು . ಪೋಲೀಸರು ಈ ಪ್ರಕರಣದಲ್ಲಿ ಪಂಚನಾಮೆ ಮಾಡಿದ ಬಗ್ಗೆ ಗೊತ್ತು. ದಿನಾಂಕ:11-06-2019 ರಂದು ಸಂಜೆ 4-00 ಗಂಟೆ ಸಮಯದಲ್ಲಿ ಸಾರೇಕೊಪ್ಪದ ಮಂಜುನಾಥ ರವರ ಮನೆಯ ಹತ್ತಿರ ಟಾರ್ ರಸ್ತೆಯಲ್ಲಿ ಪ್ರಾ.ಸಾ-1 ಮತ್ತು 2 ರವರು ಹಾಜರಿದ್ದೆವು. ಪ್ರಾ.ಸಾ-1 ರವರು ತನ್ನ ಮತ್ತು ಚಾಸಾ-2 ರವರ ಮತ್ತು ಆರೋಪಿತರ ನಡುವೆ ಗಲಾಟೆಯಾಗಿದ್ದು ಎಂದು ಸ್ಥಳವನ್ನು ತೋರಿಸಿರುತ್ತಾರೆ . ಸ್ಥಳದಲ್ಲಿ ಕಲ್ಲುಗಳು ಮತ್ತು ದೊಣ್ಣೆಯನ್ನು ಪೋಲೀಸರಿಗೆ ತೋರಿಸಿದ್ದು ಆರೋಪಿತರು ಅವುಗಳಿಂದ ತಮಗೆ ಮತ್ತು ತನ್ನ ತಮ್ಮನಿಗೆ ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಪೋಲೀಸರು ಸ್ಥಳದಲ್ಲಿ ಮಹಜರ್ ಮಾಡಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಮಹಜರ್ ಕಾಲಕ್ಕೆ ಪೋಲೀಸರು ಫೋಟೋಗಳನ್ನು ತೆಗೆಸಿರುತ್ತಾರೆ. ಮಹಜರ್ ನ್ನು ಈಗಾಗಲೇ ನಿಪಿ -2 ಎಂದು ಗುರುತಿಸಲಾಗಿದೆ , ನನ್ನ ಸಹಿಯನ್ನು ನಿಪಿ -2(ಸಿ) ಎಂದು ಗುರುತಿಸಲಾಗಿದೆ ಸದರಿ ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ 3 ಮತ್ತು 4 ಎಂದು ಗುರುತಿಸಲಾಗಿದೆ. ಆ ದಿನ ನನ್ನ ಜೊತೆಯಲ್ಲಿ ಪ್ರಾ.ಸಾ-1 ಮತ್ತು ಪ್ರಾಸಾ 2 ರವರು ಇದ್ದು ಅವರು ಸಹ ಮಹಜರ್ಗೆ ಸಹಿ ಮಾಡಿರುತ್ತಾರೆ. ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡಿದ್ದ 2

ಕಲ್ಲುಗಳು ಮತ್ತು ಒಂದು ರೀಪೀಸ್ ನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು ಮಾ -1 ರಿಂದ ಮು ಮಾ 3 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲಿಗೆ ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).